ಪ್ರತಿರೋಧ ಶಕ್ತಿ ಕಡಿಮೆಯಾಗುವುದು. ರೋಗ ನಿರೋಧಕ ಶಕ್ತಿ ಕಡಿಮೆಯಾದಾಗ ಆರ್ಥರೈಟಿಸ್, ಅಸ್ತಮಾ ಮುಂತಾದ ಕಾಯಿಲೆಗಳು ಬರುತ್ತವೆ. ಇದರೊಂದಿಗೆ ಮೆದುಳು ಮತ್ತು ನರಮಂಡಲದ ಕ್ಷಮತೆಯ ಶಕ್ತಿಯನ್ನು ಕುಂದಿಸುವ ಜತೆಗೆ ಇತರ ರೋಗಗಳ ಪ್ರತಿರೋಧವನ್ನು ನಿಭಾಯಿಸುವ ಸಾಮರ್ಥ್ಯವನ್ನು ದೇಹ ಕಳೆದುಕೊಳ್ಳುತ್ತದೆ. ದೈಹಿಕ ಬದಲಾವಣೆ.. ಇದರ ಪರಿಣಾಮ ಗಂಭೀರ ಸ್ವರೂಪದ ಅಂಗವೈಕಲ್ಯತೆ ಉಂಟಾಗಬಹುದು ಮತ್ತು ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗಿ ಪರಾವಲಂಬಿಯಾಗಬೇಕಾಗುತ್ತದೆ. ಇದೇ ಮಲ್ಟಿಪಲ್ ಸ್ಕ್ಲೆರೋಸಿಸ್ ರೋಗಕ್ಕೆ ಮೂಲ ಕಾರಣವಾಗುತ್ತದೆ. ಕೆಲವೊಮ್ಮೆ ಆನುವಂಶಿಕವಾಗಿಯೂ ಈ ರೋಗ ಕಾಣಿಸಿಕೊಳ್ಳಬಹುದು, ವಿಟಮಿನ್ ಡಿ ಕೊರತೆಯಿಂದಲೂ ಬಾಧಿಸುವ ಸಾಧ್ಯತೆ ಇದೆ.

ಸಂವೇದನಾ ಅಂಗಗಳಾದ ಕಣ್ಣು, ಕಿವಿ ಚರ್ಮ ಮುಂತಾದವುಗಳಿಗೆ ಮೆದುಳು ನೀಡುವ ನಿರಂತರ ಸೂಚನೆಗಳಲ್ಲಿ ವ್ಯತ್ಯಾಸ ಉಂಟಾದಾಗ ಮಲ್ಟಿಪಲ್ ಸ್ಕ್ಲೆರೋಸಿಸ್ ಕಂಡುಬರುತ್ತದೆ. ಇದು ಮೆದುಳು ಮತ್ತು ನರಮಂಡಲವನ್ನು ಅವಲಂಬಿಸಿರುವುದರಿಂದ ಬಹು ಅಂಗವೈಕಲ್ಯಕ್ಕೆ ಕಾರಣವಾಗುತ್ತದೆ.



ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಕಾಯುತ್ತಿರುವ ಮಲ್ಟಿಪಲ್ ಸ್ಕ್ಲೆರೋಸಿಸ್ ರೋಗಿಗಳು

## ಮಹಿಳೆಯರಲ್ಲಿ ಹೆಚ್ಚು

ಸಾಮಾನ್ಯವಾಗಿ 20 ರಿಂದ 40 ರ ವಯೋಮಾನದ ಯುವಜನರಲ್ಲಿ ಈ ಎಂಎಸ್ ಕಾಣಿಸಿಕೊಳ್ಳುತ್ತದೆ. ಈ ಪೈಕಿ ಮಹಿಳೆಯರಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಪ್ರಮುಖ ಕಾರಣ ಮಹಿಳೆಯರಲ್ಲಿ ಕಂಡುಬರುವ ಹಾರ್ಮೋನ್ ಏರಿಳಿತ. ಹೀಗಾಗಿ ಪುರುಷರಿಗಿಂತ ಸುಮಾರು ಎರಡು ಪಟ್ಟು ಹೆಚ್ಚು ಮಹಿಳೆಯರು ಈ ರೋಗದಿಂದ ಬಳಲುತ್ತಿದ್ದಾರೆ.

## ರೋಗ ಲಕ್ಷಣಗಳೇನು?

'ಇದೊಂದು ವಿರಳ ಕಾಯಿಲೆಗಳ ಸಾಲಿಗೆ ಸೇರುವ ರೋಗ. ಆರಂಭದಲ್ಲಿ ಆರಂಭದಲ್ಲಿ ಕಣ್ಣು ಮಂಜಾಗುವುದು, ಕಾಲು ಜೋಮು ಹಿಡಿಯುವುದು, ಮರೆಗುಳಿತನ, ಕಣ್ಣುನೋವು ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕಣ್ಣು, ಬೆನ್ನುಮೂಳೆ, ಮೆದುಳು ಕ್ಷಮತೆಯನ್ನು ಕಳೆದುಕೊಂಡು ಬಲಹೀನವಾಗುತ್ತದೆ. ಇದರಿಂದ ಇಡೀ ದೇಹ ಸಮತೋಲನ ಕಳೆದು ಕೊಳ್ಳುತ್ತದೆ. ಕಣ್ಣು ಮಂಜಾಗುವ ಜತೆಗೆ ಎರಡೆರಡು ಬಿಂಬ ಮೂಡಿದಂತಹ ಅನುಭವ, ನಡೆಯುವಾಗ ಸಮತೋಲನ ತಪ್ಪುವುದು, ಕಾಲು ಜೋಮು ಹಿಡಿಯುವುದು, ನಡೆಯಲು ಅನಾನುಕೂಲವಾಗುವುದು, ತಲೆಸುತ್ತು, ವಿಪರೀತ ಆಯಾಸ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ' ಎಂದು ವಿವರ ನೀಡುತ್ತಾರೆ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯ ನರರೋಗ ತಜ್ಞ ಡಾ.ರಾಜೇಶ್ ಬಿ. ಅಯ್ಯರ್.

'ಈ ರೋಗ ಬಂದಿರುವುದು ಮೊದಲಿಗೆ ಅರಿವಿಗೆ ಬರುವುದೇ ಇಲ್ಲ. ಕಣ್ಣು ಮಂಜಾಗುವುದು, ತಲೆಸುತ್ತು ಮುಂತಾದ ಲಕ್ಷಣಗಳು ಸಾಮಾನ್ಯವೇ ಎಂದು ಜನ ಭಾವಿಸುತ್ತಾರೆ. ಆದರೆ ರೋಗದ ತೀವ್ರತೆ ಅರಿವಾಗುವುದು ಅಂತಿಮ ಹಂತದಲ್ಲೇ. ಇದನ್ನು ಎಂಆರ್ಐ ಸ್ಕ್ಯಾನ್, ರಕ್ತಪರೀಕ್ಷೆಗಳ ಮೂಲಕ ಪತ್ತೆ ಹಚ್ಚಬಹುದು. ಜತೆಗೆ ವಿಷುವಲ್ ಇವೋಕ್ಡ್ ಪೊಟೆನ್ಶಿಯಲ್ ಟೆಸ್ಟ್ (ವಿಇಟಿ) ಮೂಲಕ ಬಹು ಅಂಗವೈಕಲ್ಯ ಕಾಯಿಲೆಯನ್ನು ನಿಖರವಾಗಿ ಕಂಡು ಹಿಡಿಯಬಹುದು' ಎಂದು ಮಾಹಿತಿ ನೀಡುತ್ತಾರೆ ಡಾ. ರಾಜೇಶ್.

## ಚಿಕಿತ್ಸೆ ಹೇಗೆ?

'ಮೊದಲಿಗೆ ದೇಹದಲ್ಲಿ ರೋಗ ಪ್ರತಿರೋಧ ಶಕ್ತಿ ಹೆಚ್ಚಿಸುವ ಔಷಧಿ ನೀಡಲಾಗುತ್ತದೆ. ಒಮ್ಮೆ ಈ ರೋಗ ಬಂದರೆ ಜೀವನಪೂರ್ತಿ ಔಷಧಿ ತೆಗೆದು ಕೊಳ್ಳಬೇಕಾಗುತ್ತದೆ. ರೋಗ ಉಲ್ಬಣಿಸಿದರೆ ಸ್ಟೀರಾಯ್ಡ್ ಇಂಜೆಕ್ಷನ್ ನೀಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಡಿಸೀಸ್ ಮಾಡಿಫೈಯಿಂಗ್ ಥೆರಪಿ ಕೊಡಬೇಕಾಗುತ್ತದೆ. ಈ ರೋಗ ನಿವಾರಣೆಗೆ ಲಸಿಕೆ ಮತ್ತು ಔಷಧಿಗಳು ಇವೆ. ಆದರೆ ಈ ಚಿಕಿತ್ಸೆ ಕೈಗೆಟುಕುವ ದರದಲ್ಲಿ ಸಿಗದೆ ದುಬಾರಿಯಾಗಿವೆ' ಎನ್ನುತ್ತಾರೆ ಡಾ.ರಾಜೇಶ್.

ಈ ರೋಗ ನಿವಾರಣೆಗೆ ಪ್ರತಿದಿನ ನಡಿಗೆ, ಯೋಗ, ವ್ಯಾಯಾಮ, ಧ್ಯಾನ, ಸಕಾರಾತ್ಮಕ ವರ್ತನೆ ಸೇರಿದಂತೆ ಹಲವು ವಿಧಾನಗಳನ್ನು ರೂಢಿಸಿಕೊಂಡಲ್ಲಿ ಎಂಎಸ್ ರೋಗವನ್ನು ದೂರವಿಡಬಹುದು. ಜೀವನಶೈಲಿಯಲ್ಲಿ ಮಾರ್ಪಾಡು, ಪೌಷ್ಟಿಕ ಆಹಾರ ಸೇವನೆ, ಧೂಮಪಾನ, ಮದ್ಯಪಾನದಂತಹ ದುಶ್ಚಟಗಳಿಂದ ದೂರವಿರುವುದು, ಉತ್ತಮ ಸಂಗೀತ ಆಲಿಸುವುದು, ಸದಾ ಚಟುವಟಿಕೆಯಿಂದ ಇರುವುದರಿಂದಲೂ ಈ ರೋಗದ ಅಪಾಯದಿಂದ ಪಾರಾಗಬಹುದು.

## ಅರಿವು, ಜಾಗೃತಿ ಅಗತ್ಯ

'ಬಹು ಅಂಗವೈಕಲ್ಯ ರೋಗದ ಬಗ್ಗೆ ಜನರಲ್ಲಿ ಜಾಗೃತಿ, ಅರಿವು ಇಲ್ಲ, ಇದರ ತೀವ್ರತೆ ಬಗ್ಗೆ ಅನೇಕರಿಗೆ ತಿಳಿದೇ ಇಲ್ಲ. ಕರ್ನಾಟಕದಲ್ಲಿ ಸುಮಾರು ಐದು ಸಾವಿರ ರೋಗಿಗಳು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ದೇಶದಲ್ಲಿ ಸುಮಾರು ಎರಡು ಲಕ್ಷ ಮಂದಿ ಬಹು ಅಂಗವೈಕಲ್ಯದಿಂದ ಪಾಡು ಪಡುತ್ತಿದ್ದಾರೆ. ಬೆಂಗಳೂರಿನ ವಿಕ್ರಮ್ ಆಸ್ಪತ್ರೆಗೆ ಈ ಸಮಸ್ಯೆಗೆ ಚಿಕಿತ್ಸೆ ಪಡೆಯುವವರು ಸುಮಾರು ನೂರು ಮಂದಿ ರೋಗಿಗಳು. ವರ್ಷದಿಂದ ವರ್ಷಕ್ಕೆ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ' ಎಂದು ವಿವರ ನೀಡುತ್ತಾರೆ ಬೆಂಗಳೂರು ವಿಭಾಗದ ಕರ್ನಾಟಕ ಮಲ್ಟಿಪಲ್ ಸ್ಕ್ಲೆರೋಸಿಸ್ ಸೊಸೈಟಿಯ ಅಧ್ಯಕ್ಷರಾದ ಶಂಕರ್.

'ಇದು ಸಾಮಾನ್ಯವಾಗಿ ಯೂರೋಪ್, ಉತ್ತರ ಅಮೆರಿಕಾ ಮುಂತಾದ ಶೀತವಲಯಗಳಲ್ಲಿ ಕಂಡುಬರುತ್ತಿದ್ದ ರೋಗವಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳಲಾರಂಭಿಸಿದೆ. ಅಲ್ಲದೆ ವರ್ಷದಿಂದ ವರ್ಷಕ್ಕೆ ರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳ ಕಾಣುತ್ತಿರುವುದು ಕಳವಳಕಾರಿಯೂ ಹೌದು' ಎನ್ನುತ್ತಾರೆ ಶಂಕರ್.

ಅಂದ ಹಾಗೆ ಮೇ 30ರಂದು ವಿಶ್ವ ಮಲ್ಟಿಪಲ್ ಸ್ಕ್ಲೆರೋಸಿಸ್ ದಿನ. ಇದರ ಅಂಗವಾಗಿ ಬೆಂಗಳೂರಿನ ವಿಕ್ರಮ್ ಆಸ್ಪತ್ರೆ ರೋಗಿಗಳಿಗೆ ಜಾಗೃತಿ ಶಿಬಿರ ಆಯೋಜಿಸಿತ್ತು. ನೂರಾರು ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ರೋಗದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದರು. ಇದೇ ಸಂದರ್ಭದಲ್ಲಿ ರೋಗಿಗಳಿಗೆ ವೀಲ್‌ಚೇರ್ ಅನ್ನೂ ವಿತರಣೆ ಮಾಡಲಾಯಿತು.